1) ಹೌದು

2) ಸಿಬ್ಬಂದಿ ಕೊರತೆ ಇರುವುದರಿಂದ ಬದಲಿ ವ್ಯವಸ್ಥೆಯಿಂದ ರಜಾದಿನಗಳಲ್ಲಿ ಸೇವೆ ನೀಡಲು ಸಾಧ್ಯವಾಗುತ್ತಿಲ್ಲ.

ಶ್ರೀ ರಾಮಲಿಂಗಾರೆಡ್ಡಿ:– ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಜಯನಗರದ ಲೈಬ್ರರಿಗೆ ಪ್ರತಿ ಸೋಮವಾರ ರಜಾ ಇರುತ್ತದೆ. ಮತ್ತೆ ಎರಡನೇ ಶನಿವಾರ ಸಹ ರಜಾ ಕೊಟ್ಟುಬಿಟ್ಟಿರುತ್ತಾರೆ. ಮತ್ತೆ ಸಾರ್ವಜನಿಕವಾಗಿ ಯಾವತ್ತು ರಜಾ ಇರುತ್ತದೋ ಆಗಲೂ ರಜಾ ಕೊಟ್ಟಿರುತ್ತಾರೆ. ಸಾಮಾನ್ಯವಾಗಿ ರಜಾ ಇದ್ದ ದಿವಸ ಓಪನ್ ಮಾಡಿದರೆ ಮಕ್ಕಳಿಗೆ ಹೋಗಲಿಕ್ಕೆ ಓದಲಿಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು:– ಹೇಳಿದ್ದಾರೆ. ಸಿಬ್ಬಂದಿ ಕೊರತೆ ಇದೆ ಎಂದು ಹೇಳಿದ್ದಾರೆ.

ಶ್ರೀ ರಾಮಲಿಂಗಾರೆಡ್ಡಿ:- ಹೇಳಿದ್ದಾರೆ. ಆದರೆ....

ಅಧ್ಯಕ್ಷರು:– ಏನು ಉತ್ತರ ಹೇಳುತ್ತಾರೋ ನೋಡೋಣ. ನೀವೆಲ್ಲಾ ಒಟ್ಟಿಗೆ ಕಾರ್ಪೊರೇಟರ್ಸ್ ಆಗಿದ್ದವರು. ಸಿಬ್ಬಂದಿ ಕೊರತೆಗೆ ಏನು ಮಾಡುತ್ತೀರಿ?

ಶ್ರೀ ಆರ್.ಕೃಷ್ಣಪ್ಪ:– ಸರ್ಕಾರಕ ಅವರ ಕೋರಿಕೆಯ ಬಗ್ಗೆ ಪರಿಶೀಲಿಸುತ್ತದೆ. ಮುಂದೆ ಪ್ರಯತ್ನ ಮಾಡುತ್ತೇವೆ.

ಶ್ರೀ ರಾಮಲಿಂಗಾರೆಡ್ಡಿ:– ಇದು ಮಾಮೂಲಿ ಉತ್ತರವಾಯಿತು. ಸಾಧಾರಣವಾಗಿ ತಮಗೆ ಗೊತ್ತಿದೆ. ವಿದ್ಯಾರ್ಥಿಗಳು ರಜಾ ಇದ್ದ ದಿವಸ ಲೈಬ್ರರಿಗೆ ಹೋಗಿ ಓದಲಿಕ್ಕೆ ಅನುಕೂಲವಾಗುತ್ತದೆ. ಷಿಫ್ಟ್ ಸಿಸ್ಟಂ ಮಾಡಿದರೆ ತೊಂದರೆ ಏನೂ ಇಲ್ಲವಲ್ಲಾ.

ಅಧ್ಯಕ್ಷರು:- ಈಗ ಲೈಬ್ರರಿ ವಿಚಾರದಲ್ಲಿ ಏನು ಮಾಡಬೇಕು. ಸಿಬ್ಬಂದಿ ಕೊರತೆ ಬಗ್ಗೆ ಸ್ವಲ್ಪ ಬೇಗ ಸರಿದೂಗಿಸಿಕೊಂಡು ರಜಾ ದಿನಗಳಲ್ಲೂ ಕೂಡ ಓಪನ್ ಮಾಡಿಸುವ ವ್ಯವಸ್ಥೆ ಮಾಡಬೇಕು.

ಶ್ರೀ ಆರ್.ಕೃಷ್ಣಪ್ಪ:- ಸ್ವಾಮಿ, ಅಲ್ಲಿ ಸುಮಾರು 11 ಜನರಿದ್ದಾರೆ. 6 ಜನ ಬೆಳಿಗ್ಗೆ 8.30 ಗಂಟೆಯಿಂದ ಮಧ್ಯಾಹ್ನ 3.30 ಗಂಟೆವರೆಗೆ ಕೆಲಸ ಮಾಡುತ್ತಾರೆ. ಮಧ್ಯಾಹ್ನ 12.30ರಿಂದ ರಾತ್ರಿ 8.30ರವರೆಗೂ 2ನೇ ಷಿಫ್ಟ್ ಕೆಲಸ ಮಾಡುತ್ತಾರೆ. ಅಲ್ಲಿರುವುದೇ 11 ಜನ. ಹೆಚ್ಚು ಸಿಬ್ಬಂದಿಯನ್ನು ಒದಗಿಸಲು ಪ್ರಯತ್ನಪಡುತ್ತೇನೆ. ರಜಾ ದಿನಗಳಲ್ಲೂ ಲೈಬ್ರರಿಯನ್ನು ತೆರೆಸಲು ಪ್ರಯತ್ನ ಮಾಡುತ್ತೇನೆ.

680 ಶ್ರೀಮತಿ. ಬಿ.ಟಿ.ಲಲಿತಾ ನಾಯಕ್(ದೇವದುರ್ಗ):

ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಅರಣ್ಯ ಬೆಳೆಸುವ ಕಾರ್ಯವು ಮುಂದುವರೆದಿದೆಯೇ? ಎಷ್ಟು ಪ್ರದೇಶದಲ್ಲಿ ಈ ಕಾರ್ಯ ಆಗಿದೆ ಎಷ್ಟು ಸಾಲುಮರಗಳನ್ನು ನೆಡಲಾಗಿದೆ;

(ಆ) ಅವುಗಳಿಗಾಗಿ ಆದ ವೆಚ್ಚವೆಷ್ಟು?

ಗುರುಪಾದಪ್ಪ ನಾಗಮಾರಪಲ್ಲಿ ಅರಣ್ಯ ಸಚಿವರು

(ಅ) ರಾಜ್ಯದ ಸರ್ಕಾರಿ, ಸಾರ್ವಜನಿಕ ಹಾಗೂ ಗ್ರಾಮ ಸಮುದಾಯದ ಕ್ಷೀಣಿತ ಅರಣ್ಯ ಹಾಗೂ ಬಂಜರು ಭೂಮಿಯಲ್ಲಿ ವೃಕ್ಷ ನೆಡುತೋಪು ಬೆಳೆಸುವ ಮೂಲಕ ಅರಣ್ಯೀಕರಣ ಕಾರ್ಯವನ್ನು ಮುಂದುವರೆಸಲಾಗಿದೆ. 8ನೇ ಪಂಚವಾರ್ಷಿಕ ಯೋಜನೆ ಜಾರಿಯಾದ ಅವಧಿಯಿಂದ ಈವರೆಗೂ ಕೈಗೊಂಡ ಅರಣ್ಯೀಕರಣದ ಪ್ರಗತಿ ಈ ಕೆಳಕಂಡಂತಿದೆ.

ವರ್ಷ	ವೃಕ್ಷ ನೆಡುತೋಪು ನಿರ್ಮಾಣ(ಹೆಕ್ಟೇರುಗಳಲ್ಲಿ)	ನಾಟಿ ಮಾಡಿದ ಸಸಿಗಳು (ಲಕ್ಷಗಳಲ್ಲಿ)
1992-93	36480	541.468
1993-94	46429	637.357
1994-95	58452	608.501
1995-96	65712	742.799
1996-97	60303	653.068
(ಡಿಸೆಂಬರ್ 96ರ ಅಂತ್ಯದವರೆಗೆ)		

ರಾಜ್ಯದ ಹೆದ್ದಾರಿಗಳಲ್ಲಿ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ತಾಲ್ಲೂಕು: ಗ್ರಾಮಗಳ ಸಾರ್ವಜನಿಕ ರಸ್ತೆಗಳ ಇಬ್ಬದಿಯಲ್ಲಿ ಹಾಗೂ ನಗರ ಪ್ರದೇಶಗಳ ರಸ್ತೆಗಳಲ್ಲಿ ನಾಟಿ ಮಾಡಿದ ಸಾಲುಮರಗಳ ಸಂಖ್ಯೆ ಈ ಕೆಳಕಂಡತಿದೆ.

1992-93	ಕಿ.ಮೀಟರು	ಸಸಿಗಳ ಸಂಖ್ಯೆ
1992-93	1962	10.150 ಲಕ್ಷ ಸಸಿಗಳು
1993-94	3232	19.973 ಲಕ್ಷ ಸಸಿಗಳು
1994-95	2598	10.638 ಲಕ್ಷ ಸಸಿಗಳು
1995-96	3431	9.729 ಲಕ್ಷ ಸಸಿಗಳು
1996-97	1851	6.391 ಲಕ್ಷ ಸಸಿಗಳು

(ಅ) ಮೇಲ್ಕಂಡ ವರ್ಷಗಳಲ್ಲಿ ಅರಣ್ಯ ಇಲಾಖೆಯ ಎಲ್ಲಾ ಯೋಜನಾ ಯೋಜನೇತರ ಹಾಗೂ ಗ್ರಾಮೀಣ ಅಭಿವೃದ್ಧಿ ಯೋಜನೆಗಳಲ್ಲಿ ಅರಣ್ಯೀಕರಣಕ್ಕಾಗಿ ವೆಚ್ಚ ಮಾಡಿದ ಒಟ್ಟು ಹಣದ ವಿವರ ಈ ರೀತಿ ಇದೆ.

ವರ್ಷ	ಅರಣ್ಯೀಕರಣಕ್ಕಾಗಿ ವೆಚ್ಚ ಮಾಡಿದ ಹಣ (ರೂ. ಲಕ್ಷಗಳಲ್ಲಿ)
1992-93	4659.749
1993-94	5642.669
1994-95	7162.098
1995-96	8502.865
1996-97	3146.693

(96ನೇ ಡಿಸೆಂಬರ್ ಅಂತ್ಯದವರೆಗೆ)

ಶ್ರೀಮತಿ. ಬಿ.ಟಿ. ಲಲಿತಾ ನಾಯಕ್:– ಈ ಉತ್ತರದಲ್ಲಿ ಮಾನ್ಯ ಸಚಿವರು ನೆಡು ತೋಪು ಬೆಳೆಸುವ ಕಾರ್ಯಕ್ರಮವನ್ನು ಮುಂದುವರಿಸಿದ್ದೇವೆಂದು ತಿಳಿಸಿದ್ದಾರೆ. ಬೆಟ್ಟ ಗುಡ್ಡ ಇರುವಂತಹ ಕಡೆಗಳಲ್ಲಿ ನೆಡು ತೋಪುಗಳನ್ನು ಹಾಕುತ್ತಾರೆ. ಒಂದು ಕಡೆ ದನ ಕರು ಮೇಯುವುದಕ್ಕೆ ಬಿಡುವುದಿಲ್ಲ ಮತ್ತೊಂದು ಕಡೆ ಅವುಗಳಿಗೆ ಬೇಕಾದ ಹುಲ್ಲು ಇತ್ಯಾದಿಗಳನ್ನು ಸರಿಯಾಗಿ ಬೆಳೆಸುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಜನ ರೈತರಿಗೆ ಜಿಲ್ಲಾ ಪಂಚಾಯತಿಯ ಸಂಪರ್ಕ ಇರುವುದಿಲ್ಲ. ನೆಡು ತೋಪುಗಳನ್ನು ಎಲ್ಲೆಂದರಲ್ಲಿ ನೆಡುತ್ತಾರೆ. ರಸ್ತೆಗಳನ್ನು ಮಾಡುವಾಗ ಜನರು ಗಿಡವನ್ನು ನಾಶ ಮಾಡಬೇಕು ಇದನ್ನು ನೆಡುವಾಗ ಒಂದು ಯೋಜನೆಯನ್ನು ಹಾಕಿಕೊಂಡು ನೆಡಬೇಕಾಗುತ್ತದೆ. ಜಿಲ್ಲಾ ಪಂಚಾಯತಿಯವರು ಗಿಡ ನೆಡಬೇಕಾದಾಗ ಅದನ್ನು ನಾಶ ಮಾಡುತ್ತಾರೆ. ಎಲ್ಲಿ ಗಿಡಗಳನ್ನು ನೆಡಬೇಕೆಂದು ಅವರಿಗೆ ಗೊತ್ತಾಗುವುದಿಲ್ಲ. ಹೊಲದ ಬದಿಗಳಲ್ಲಿ ಗಿಡಗಳನ್ನು ನೆಡುತ್ತಾರೆ. ಇದರಿಂದ ರೈತನ ಪೈರು ನಾಶವಾಗುತ್ತದೆಂದು ಅವನು ಕಿತ್ತು ಹಾಕುತ್ತಾನೆ. ಇನ್ನು ಮರ ಮುಟ್ಟುಗಳನ್ನು ಅರಣ್ಯ ಇಲಾಖೆಯಿಂದ ಕೊಡುತ್ತೇವೆಂದು ಕೇಳಿದ್ದೇನೆ ಯಾರಿಗೆ ಎಷ್ಟು ಕೊಡುತ್ತೀರಿ ಎಂದು ತಿಳಿಸಬೇಕು. ನಮ್ಮಂತಹವರಿಗೆ ಇದುವರೆಗೆ ಆ ರೀತಿ ಸಿಕ್ಕಿಲ್ಲ. ಇದರಲ್ಲಿ ಯಾವ ತಂತ್ರ ಬಳಸಿ ಕೊಡುತ್ತಾರೋ ಗೊತ್ತಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ನೆಡು ತೋಪಿನಲ್ಲಿ ದನಗಳಿಗೆ ಮೇಯಿಸುವುದಕ್ಕೆ ಕೊಡುವ ಪ್ರಶ್ನೆ ಬರುವುದಿಲ್ಲ. ಅದಕ್ಕೆ ಬೇಕಾದರೆ ವಿನಾಯಿತಿ ತೆಗೆದುಕೊಳ್ಳಬೇಕು ಆ ಊರಿನಲ್ಲಿ ತೊಂದರೆ ಇದ್ದರೆ ಊರ ಸುತ್ತ ಮುತ್ತ ಏನಾದರೂ ಇದ್ದರೆ ಕನ್ಸರ್ವೇಷನ್ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ನಾವು ಕೊಡುವುದಕ್ಕಾಗುವುದಿಲ್ಲ. ಹೊಲದ ಪಕ್ಕಕ್ಕೆ ಹಾಕುತ್ತಾರೆ ಅದನ್ನು ಅವರು ತೆಗೆಯುತ್ತಾರೆಂದು ಸದಸ್ಯರು ಹೇಳಿದರು. ಅದರ ಬಗ್ಗೆ ಫ್ರೀ ಪಟ್ಟಾ ಎಂದು ಮಾಡಿದ್ದೇವೆ ಆ ಹೊಲಗಳ ಪಕ್ಕಕ್ಕೆ ಏನು ಹಾಕುತ್ತೇವೆ ಹಣ್ಣಿನ ಮರಗಳನ್ನೇ ಹೆಚ್ಚು ಹಾಕುತ್ತೇವೆ. ಆ ಹೊಲದ ಒಡೆಯರಿಗೆ ಪಟ್ಟಾ ಮಾಡಿಕೊಡುತ್ತೇವೆ. 2 ರೂಪಾಯಿ ನಾಮಿನಲ್ ಫೀ ಎಂದು ತೆಗೆದು ಕೊಳ್ಳುತ್ತೇವೆ. ಅದಕ್ಕೆ 75 ಪರ್ಸೆಂಟ್ ಲಾಭ ರೈತರಿಗಾಗುತ್ತದೆ. ಅಷ್ಟೂ ಮರಗಳನ್ನು ಅವರಿಗೇ ಕೊಡುತ್ತೇವೆ. ಇದರಿಂದ ಮರ ಹೆಚ್ಚಾಗುತ್ತದೆ. ಅವರಿಗೂ ಅನುಕೂಲವಾಗುತ್ತದೆ. ಸಿಟಿಯಲ್ಲೂ ಕೂಡ ಯಾರ ಮನೆ ಮುಂದೆ ಹಾಕುತ್ತೇವೆ ಅವರು ಅದನ್ನು ನೋಡಿಕೊಂಡರೆ

ಅವರಿಗೂ ಕೂಡ ಪಟ್ಟಾ, 75 ಪರ್ಸೆಂಟ್ ಕೊಡಬೇಕೆಂಬ ವಿಚಾರ ಮಾಡಿದ್ದೇವೆ. ಹೀಗೆ ಮಾಡಿದರೆ ಅನುಕೂಲವಾಗುತ್ತದೆ ಯಾರಿಗೂ ತೊಂದರೆಯಾಗುವುದಿಲ್ಲ ಮರಗಳನ್ನು ಕಡಿಯುವುದಿಲ್ಲ. 300 ನಾನ ರೀತಿಯ ಸಸಿಗಳನ್ನು ಸಬ್ಸಿಡಿ ದರದಲ್ಲಿ ಕೊಡುತ್ತೇವೆ. ಎಲ್ಲಿಯಾದರೂ ತಪ್ಪಾಗಿದೆ ಎಂದು ಹೇಳಿದರೆ ಕ್ರಮ ತೆಗೆದು ಕೊಳ್ಳುತ್ತೇನೆ. ಅರಣ್ಯೀಕರಣ ಮಾಡಬೇಕೆಂದರೆ ವಿಶೇಷವಾಗಿ ಕಲ್ಲು ಗುಡ್ಡಗಳು ಎಂದು ಹೇಳಿದ್ದಾರೆ. ಹೊಸದಾಗಿ ಜಪಾನ್‌ನಿಂದ ನಮಗೆ 565 ಕೋಟಿ ರೂಪಾಯಿ ಬಂದಿದೆ. 135 ತಾಲ್ಲೂಕುಗಳಲ್ಲಿ ಹಸಿರೀಕರಣ ಮಾಡುವ ವ್ಯವಸ್ಥೆ ಇದೆ. ಎಲ್ಲಾ ತಾಲ್ಲೂಕುಗಳಲ್ಲಿ ಹೆಚ್ಚು ಒಳ್ಳೆ ರೀತಿಯಲ್ಲಿ ಹಸಿರೀಕರಣ ಮಾಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀಮತಿ. ಬಿ.ಟಿ.ಲಲಿತಾ ನಾಯಕ್:- ವಿಧಾನ ಸೌಧದ ಹತ್ತಿರ ಎಲ್ಲೇ ಆಗಲೀ ಒಂದೂ ಬೇವಿನ ಮರ ಆಗಲೀ ತುಳಸಿ ಗಿಡವಾಗಲೀ ಇಲ್ಲಿ ಹತ್ತಿರದಲ್ಲಿ ಇಲ್ಲ. ಮೆಡಿಸನ್‌ಗೆ ಬೇಕಾದಂತಹ ಸಸ್ಯಗಳನ್ನು ಇವರು ಬೆಳೆಸಲಿಕ್ಕೆ ಪ್ರಯತ್ನ ಮಾಡಬಹುದು. ಹೈದರಾಬಾದ್ ಕರ್ನಾಟಕದ ಕಡೆ ಎಲ್ಲೆಂದರಲ್ಲಿ ಬೇವು ಇರುತ್ತವೆ. ಆದರೆ ಇಲ್ಲಿ ಬೆಳಿಗ್ಗೆ ಹಲ್ಲು ತಿಕ್ಕಬೇಕೆಂದರೆ ಒಂದು ಗಿಡ ಇರುವುದಿಲ್ಲ. ಈ ಸಸ್ಯ ಬೆಳೆಸುವುದರಿಂದ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮವಾಗುತ್ತದೆ. ಯಾವುದೋ ಗಿಡಗಳನ್ನು ಬೆಳೆಸುವ ಬದಲು ಇದನ್ನು ಬೆಳೆಸುವ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು.

ಶ್ರೀ **ಗುರುಪಾದಪ್ಪ ನಾಗಮಾರಪಲ್ಲಿ**:- ಮೆಡಿಸನ್ ಸಲುವಾಗಿ ಈಗ ಸಂಜೀವಿನಿ ವನವೆಂದು ಬೆಳೆಸುತ್ತಿದ್ದೇವೆ. ಇದನ್ನು ಬೇರೆ ಎಲ್ಲಾ ಜಿಲ್ಲೆಯಲ್ಲೂ ಮಾಡಬೇಕೆಂಬ ಉದ್ದೇಶ ಇದೆ. ಒಳ್ಳೆಯ ಸಲಹೆಯನ್ನು ಸದಸ್ಯರು ಕೊಟ್ಟರು. ವಿಧಾನ ಸೌಧದ ಪಕ್ಕದಲ್ಲಿ ಎಲ್ಲಿಯಾದರೂ ಬೇಕಾದರೆ ಹಾಕಲಿಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಅದರಲ್ಲೂ ವಿಶೇಷವಾಗಿ ಹುಣಸೇ ಮರ, ಬೇವಿನಮರ ಹಣ್ಣಿನ ಮರವನ್ನು ಜಾಸ್ತಿ ಬೆಳೆಸಬೇಕೆಂದು ಇದ್ದೇವೆ. ನಿಮಗೆ ಯಾವುದು ಬೇಕೋ ಅದನ್ನು ಹಾಕಿಸುತ್ತೇವೆ. ರೈತರಿಗೆ ಅನುಕೂಲವಾಗುವ ರೀತಿ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀಮತಿ. ಪ್ರಮಿಳಾ ನೇಸರ್ಗಿ:- ಹುಣಸೇ ಮರ ಬೇಡ ದೆವ್ವಗಳು ಬರುತ್ತವೆಂದು ಪ್ರತೀತಿ ಇದೆ.

ಶ್ರೀ **ವಾಟಾಳ್‌ನಾಗರಾಜ್**:- ಇತ್ತೀಚೆಗೆ ಹುಣಸೇ ಮರ ಅಂದರೆ ಶಾಸಕರೆಂದು ಹೇಳುತ್ತಿದ್ದಾರೆ.

ಶ್ರೀ ಸಿ.ಹೆಚ್.ವಿಜಯಶಂಕರ್:- ಮಾನ್ಯ ಲಲಿತಾ ನಾಯಕ್‌ರವರ ಪ್ರಶ್ನೆಗೆ ಪೂರಕ ಪ್ರಶ್ನೆ ಕೇಳುತ್ತಿದ್ದೇನೆ. ಸಾಮಾಜಿಕ ಅರಣ್ಯವೆನ್ನುವ ಯೋಜನೆ ಇದೆ. ಯಾವುದಾದರೂ ಯೋಜನೆಯಲ್ಲಿ 10 ಭಾಗ ದುರುಪಯೋಗವಾಗಲೀ 90 ಭಾಗ ಉಪಯೋಗವಾದರೆ ಸಂತೋಷ ಪಡೋಣ. 90 ಭಾಗ ದುರುಪಯೋಗವಾಗಿ 90 ಭಾಗ ದುರುಪಯೋಗವಾಗಬಾರದು. ಅಂತಹ ಒಂದು ಯೋಜನೆ ಸಾಮಾಜಿಕ ಅರಣ್ಯ ಯೋಜನೆಯಾಗಿದೆ. ಇದರಲ್ಲಿ ನೆಡು ತೋಪುಗಳು ಏನಾಗಿದೆ ಸಾಲುಮರಗಳ ವ್ಯವಸ್ಥೆ ಏನಾಗಿದೆ ಕಾಡು ಮೇಡುಗಳಲ್ಲಿ ನೆಟ್ಟಂತಹ ಗಿಡಗಳ ವ್ಯವಸ್ಥೆ ಏನಾಗಿದೆ ಎಂದು ಸ್ಥಳ ಪರಿಶೀಲನೆ ಮಾಡೋಣ. ಆಗ ನಾನು ಏನು ಹೇಳಿದ್ದೇವೆ ಅದು ಸತ್ಯವೆಂದು ತಾವು ಒಪ್ಪಿಕೊಳ್ಳುತ್ತೀರಿ. ಸಾಮಾಜಿಕ ವಿಭಾಗ, ವನ್ಯ ವಿಭಾಗ, ಅರಣ್ಯ ವಿಭಾಗವೆಂದು

ಮಾಡಿಕೊಂಡಿದ್ದೀರಿ. ವನ್ಯ ಜೀವಿ ವಿಭಾಗದವರು ನಾವು ಕಾಡಿನಲ್ಲಿರುವ ಪ್ರಾಣಿಗಳನ್ನು ಕಾಯ್ದುಕೊಂಡಿರುವವರು ಎಂದು ಹೇಳುತ್ತಾರೆ. ಆಗ ಅರಣ್ಯ ಪ್ರದೇಶದವರು ಇದರಲ್ಲಿ ನೀವು ಪ್ರವೇಶ ಮಾಡಲಿಕ್ಕೆ ಅವಕಾಶ ಇಲ್ಲವೆಂದು ಹೇಳುತ್ತಾರೆ. ವನ್ಯ ಜೀವಿ ವಿಭಾಗದವರ ಎದುರಿಗೆ ಮರಗಳನ್ನು ಕತ್ತರಿಸಿಕೊಂಡು ಹೋಗುತ್ತಿದ್ದರೆ ಅವರು ನಮಗೂ ಮರಗಳಿಗೂ ಸಂಬಂಧವಿಲ್ಲವೆಂದು ಸುಮ್ಮನಿರುತ್ತಾರೆ. ಎರಡು ಡಿ ಎಫ್ ಒ ಗಳನ್ನು ಮಾಡಿದ ಮೇಲೆ ನಮ್ಮಲ್ಲಿ ಕಳ್ಳತನ ಕಾಡುಪ್ರಾಣಿಗಳ ಸಮಸ್ಯೆ ಜಾಸ್ತಿಯಾಗಿದೆ. ಈ ವ್ಯವಸ್ಥೆಯನ್ನು ಅಂದರೆ ವನ್ಯ ಜೀವಿ ವಿಭಾಗ ಅರಣ್ಯ ವಿಭಾಗವೆಂಬ ವ್ಯವಸ್ಥೆಯನ್ನು ತೆಗೆದು ಹಾಕಿದರೆ ತಮಗೆ ಒಳ್ಳೆ ಹೆಸರು ಬರುತ್ತದೆ.

ಶ್ರೀ ಶ್ರೀರಂಗದೇವರಾಯಲು:– ಗಂಗಾವತಿ ತಾಲ್ಲೂಕಿನಲ್ಲಿ ಹಟ್ಸ್ ಏನು ಹಾಕಿದ್ದಾರೆ ಅದನ್ನು ಅರಣ್ಯ ಇಲಾಖೆಯವರು ನೋಟೀಸು ಕೊಟ್ಟು ಅದನ್ನು ತಿಳಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ಜನ ವಾಸ ಮಾಡುತ್ತಿದ್ದಾರೆ. ಬಹಳ ಹಟ್ಸ್‌ನಲ್ಲಿ ವಾಸ ಮಾಡುತ್ತಿರುವ ಜನರಿಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ವಿಜಯಶಂಕರವರು ಹೇಳಿದ ಪ್ರಕಾರ ವೈಲ್ಡ್ ಲೈಫ್ ಮತ್ತು ಫಾರೆಸ್ಟ್ ಅನ್ನು ಬೇರೆ ಬೇರೆ ಮಾಡಿ ಬಹಳ ತೊಂದರೆಯಾಗಿದೆ ಒಂದೇ ಮಾಡಿ ಎಂದು ಹೇಳುತ್ತಿದ್ದಾರೆ. ಎಲ್ಲಿ ವ್ಯವಸ್ಥೆ ತಪ್ಪಾಗಿದೆ ಎಲ್ಲಿ ಕಳ್ಳತನ ಮಾಡುತ್ತಿದ್ದಾರೆ ಅದನ್ನು ತಿಳಿಸಿದಲ್ಲಿ ಖಂಡಿತವಾಗಿ ನಿಲ್ಲಿಸುತ್ತೇನೆ. ಯಾರ ಬಗ್ಗೆ ಅನುಕಂಪ ದಾಕ್ಷಿಣ್ಯ ತೋರಿಸುವ ಅವಶ್ಯಕತೆ ಇಲ್ಲ. ಮೊನ್ನೆ ಕಾರವಾರದಲ್ಲಿ ಮರ ಕಡಿದಿದ್ದಾರೆ ಅವರನ್ನು ತಕ್ಷಣ ಸಸ್ಪೆಂಡ್ ಮಾಡಿ ಕ್ರಮ ತೆಗೆದು ಕೊಂಡಿದ್ದೇವೆ. ನಾವು ಇಂಥ ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗುವುದಿಲ್ಲ, ಅನುಕಂಪವನ್ನೂ ತೋರಿಸುವುದಿಲ್ಲ. ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇವೆ. ವೈಲ್ಡ್ ಲೈಫ್ ಮಾಡಿದ್ದರಿಂದ ಅದನ್ನು ಈಗ ಒಂದು ಮಾಡುವುದು ಕಷ್ಟವಾಗುತ್ತದೆ. ಎಲ್ಲಿ ತಪ್ಪಾಗಿದೆ ಅದನ್ನು ಸರಿಪಡಿಸುತ್ತೇವೆ ಮತ್ತು ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ ಸಾಮಾಜಿಕ ಅರಣ್ಯದಲ್ಲಿ ಬಹಳ ಅವ್ಯವಹಾರ ನಡೆಯುತ್ತಿದೆಯೆಂದು ತಾವು ಹೇಳಿದ್ದೀರಿ. ಅದು ಜಿಲ್ಲಾಪರಿಷತ್‌ಗೆ ಬರುತ್ತದೆ. ಅಧಿಕಾರ ವಿಕೇಂದ್ರಿಕರಣವಾದ ಮೇಲೆ ಅವರು ಅದನ್ನು ಸರಿಯಾಗಿ ನೋಡುತ್ತಿಲ್ಲ ನಮ್ಮ ಅರಣ್ಯ ಇಲಾಖೆಯವರು ಎಷ್ಟು ಪರ್‌ಸೆಂಟೇಜ್ ಮರಗಳು ಬಂದಿವೆ, ಎಂಬ ಬಗ್ಗೆ ಪರಿಶೀಲನೆ ಮಾಡಲು ಈಗಾಗಲೇ ತಜ್ಞರ ಸಮಿತಿಯನ್ನು ಮಾಡಿದ್ದೇವೆ, 82 ಪರ್‌ಸೆಂಟ್ ಮರಗಳು ಬಂದಿದೆಯೆಂದು ಹೇಳಿದ್ದಾರೆ. ರಾಷ್ಟ್ರದಲ್ಲಿಯೇ ನಮ್ಮದು ಒಳ್ಳೆಯದು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಮತ್ತೆ ನಾವು ಇಂಡಿಯನ್ ಫಾರೆಸ್ಟ್ ಕಮಿಟಿ ಭೂಪಾಲ್‌ರವರಿಗೆ ಬರೆದಿದ್ದು ಇಲ್ಲಿನ ವಾತಾವರಣವನ್ನು ನೋಡಿ, ಇಲ್ಲಿನ ಮರಗಳು ಬೆಳೆಯುತ್ತಿರುವ ಬಗ್ಗೆ ವರದಿ ಕೊಡಿ ಎಂದು ಕೇಳಿಕೊಂಡಿದ್ದೇವೆ. ಅವರೂ ಸಹ ಬಂದು ನೋಡಿದ್ದಾರೆ. ಏಲ್ಲಾದರೂ ತಪ್ಪಾಗಿದ್ದರೆ ಖಂಡಿತವಾಗಿ ತಾವು ಹೇಳಿ ಆ ಜಾಗಕ್ಕೆ ನಾನೇ ಬಂದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ಮನೆಗಳಿಗೆ ತೊಂದರೆಯಾಗಿದೆಯೆಂದು ಹೇಳಿದ್ದಾರೆ, ಏನಾದರೂ ಪರಿಹಾರ ಬರುವುದಿಲ್ಲವೆಂದರೆ ನಾನೇ ಬಂದು ಪರಿಹಾರವನ್ನು ಮಾಡಿಸಿಕೊಡುತ್ತೇನೆ, ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದು ಅವಕಾಶವಿದ್ದರೆ ಏನಾದರೂ ಸಹಾಯವನ್ನು ಮಾಡಲು ಪ್ರಯತ್ನ ಮಾಡುತ್ತೇನೆ.